**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.686/2014**

**ಪಿ.ಡಬ್ಲ್ಯೂ: 08**

**ಸಿ.ಡಬ್ಲ್ಯೂ: 09**

| | | |
|---|---|---|
| **ಹೆಸರು** | : | ಖಲಂದರ್ ಖಾನ್ |
| ತಂದೆಯ **ಹೆಸರು** | : | ರೆಹಮಾನ್ ಖಾನ್ |
| **ವಯಸ್ಸು** | : | **98 ವರ್ಷ** |
| **ಉದ್ಯೋಗ** | : | ವ್ಯವಸಾಯ |
| **ವಾಸಸ್ಥಳ** | : | ಬಾವಿಕೆರೆ |

**ದಿನಾಂಕ: 21-10-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ಆರೋಪಿ ನನಗೆ ಪರಿಚಯಸ್ಥರು. ನಮ್ಮ ಮನೆಯ ಪಕ್ಕದಲ್ಲಿರುವ ಅರಸೀಕೆರೆಯ ಸರ್ವೆ ನಂ:7 ರಲ್ಲಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ನಿವೇಶನಗಳನ್ನಾಗಿ ಮಾರ್ಪಡಿಸಿರುತ್ತಾರೆ. ಆರೋಪಿತರಾದ ಸಂದೇಶ ಶೆಟ್ಟಿ ಹಾಗೂ ವಸಂತಕುಮಾರ್, ವೆಂಕಟೇಶ ರವರು ನಿವೇಶನಗಳನ್ನಾಗಿ ಮಾರ್ಪಡಿಸಿ, ನ್ಯಾಯಾಲಯದ ಮುಂದಿರುವ ಆರೋಪಿ ಮಂಡಲ ಪಂಚಾಯ್ತಿಯಲ್ಲಿ ಕಾರ್ಯದರ್ಶಿಯಾಗಿದ್ದು, ಸದರಿ ನಿವೇಶನಗಳನ್ನು ಮಂಜೂರಿ ಮಾಡಿಕೊಡುವಂತೆ ಅಕ್ರಮವಾಗಿ ಸಹಿ ಪಡೆದುಕೊಂಡಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸದರಿ ಸರ್ವೆ ನಂಬರಿನಲ್ಲಿ ನನಗೆ ಮತ್ತು ಚಾಸಾ-*8*, ಪೀರ್ ಖಾನ್, ಅಲ್ಲಾಭಕ್ಷ್, ಖುಲ್ಲಂ ಹಾಗೂ ವೆಂಕಾಬೋವಿ ಬಿನ್ ಬಸವಾಬೋವಿ ರವರಿಗೆ ತಲಾ *3* ಎಕರೆ *1962* ನೇ ಸಾಲಿನಲ್ಲಿ ನಮಗೆ ಮಂಜೂರಿ ಮಾಡಿರುತ್ತಾರೆ. *1964* ನೇ ಸಾಲಿನಲ್ಲಿ ದುರಸ್ತಿಯಾಗಿರುತ್ತದೆ. ನಾವು *1971* ನೇ ಸಾಲಿನಲ್ಲಿ ಸದರಿ ಜಮೀನಿಗೆ ಕಂದಾಯ ಕಟ್ಟಿರುತ್ತೇವೆ. ಸದರಿ ಜಮೀನು *1976* ರಲ್ಲಿ ಕೃಷಿ ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದು ಸದರಿ ಜಮೀನುಗಳನ್ನು ಬಿಡಬೇಕೆಂದು ತಿಳಿಸಿರುತ್ತಾರೆ. ಪೋಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು : 2 ನೇ ಆರೋಪಿ ಪರ ಶ್ರೀ ಕೆ ಸಿ ವಕೀಲರಿಂದ.**

ಸರ್ವೆ ನಂ: *7* ರಲ್ಲಿ ನಮಗೆ ಮಂಜೂರಾದ ಬಗ್ಗೆ ಇರುವ ದಾಖಲೆಗಳನ್ನು ನಾನು ಪೋಲೀಸರಿಗೆ ನೀಡಿರುವುದಿಲ್ಲ. *2* ನೇ ಆರೋಪಿ ಗ್ರಾಮ ಪಂಚಾಯ್ತಿಗೆ ಖಾಯಂ ಕಾರ್ಯದರ್ಶಿ ಆಗಿರಲಿಲ್ಲ ಎಂದರೆ

ನನಗೆ ಗೊತ್ತಿಲ್ಲ. *1* ನೇ ಆರೋಪಿ ಗ್ರಾಮ ಪಂಚಾಯ್ತಿ ಸದಸ್ಯನೆಂದರೆ ಸರಿ. *1* ನೇ ಆರೋಪಿ ಅಸೆಸ್‌ಮೆಂಟ್ ಎಕ್ಸ್ ಟ್ರ್ಯಾಕ್ಟಿನ ಮೂಲ ದಾಖಲೆಗಳನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗುತ್ತಿದ್ದರೆಂದರೆ ನನಗೆ ಗೊತ್ತಿಲ್ಲ. *1* ನೇ ಆರೋಪಿ *2* ನೇ ಆರೋಪಿಯ ಮೇಲೆ ಒತ್ತಡ ಹಾಕಿ ಅಸೆಸ್ ಮೆಂಟ್ ರಿಜಿಸ್ಟರಿನಲ್ಲಿ ತಮ್ಮ ಹೆಸರನ್ನು ಬರೆಸಿರುತ್ತಾರೆಂದರೆ ಸರಿ. *2* ನೇ ಆರೋಪಿಯು ತಮ್ಮ ಹೆಸರನ್ನು ಸೇರಿಸದಿದ್ದರೆ ಕೆಲಸದಿಂದ ವಜಾ ಮಾಡುತ್ತೇನೆಂದು *1* ನೇ ಆರೋಪಿಗೆ ಒತ್ತಡ ಹಾಕಿ ತಮ್ಮ ಹೆಸರನ್ನು ಸೇರಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನಗೆ ಮಂಜೂರಾದ ಜಮೀನನ್ನು ನನ್ನ ಹೆಸರಿಗೆ ಮಾಡಿಲ್ಲದ ಕಾರಣಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***ಪಾಟೀ ಸವಾಲು : 1* ನೇ *ಆರೋಪಿ ಪರ*** ಶ್ರೀ ಕೆ ಎಲ್ ಆರ್ ಪರವಾಗಿ ಎ ಆರ್ ಕೆ ***ವಕೀಲರಿಂದ.***

ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. 1 ನೇ ಆರೋಪಿ ಒತ್ತಾಯ ಮಾಡಿ ಹೆಸರು ಸೇರಿಸಿರುವುದನ್ನು ನಾನು ಖುದ್ದಾಗಿ ಮಾಹಿತಿ ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಕೇಳಿ ತಿಳಿದಕೊಂಡಿದ್ದೇನೆಂದು ನುಡಿಯುತ್ತಾರೆ. ನಾನು ಹಾಗೂ ನನ್ನ ಮಗ ಮನೆ ಕಟ್ಟಿರುವ ಜಾಗ ಕೃಷಿ ಇಲಾಖೆಗೆ ಸೇರಿದ ಜಾಗ ಎಂದರೆ ಸರಿ. ನನ್ನ ಮತ್ತು ನನ್ನ ಮಗನ ಜಾಗಗಳ ಮದ್ಯೆ ಇರುವ ಜಾಗವು ಕೃಷಿ ಇಲಾಖೆಗೆ ಸಂಬಂದಿಸಿದೆ ಎಂದರೆ ಸರಿ. ನಾವು ವಾಸ ಮಾಡುವ ಜಾಗವು ಅನದೀಕೃತವಾಗಿರುತ್ತದೆಂದರೆ ಸರಿ. ಪಕ್ಕದ ಜಾಗವನ್ನು ಕಬಳಿಸುವ ಸಲುವಾಗಿ 1 ನೇ ಆರೋಪಿ ಮಾಡಿರುತ್ತಾನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ಸ್ದಳಕ್ಕೆ ಬಂದಿಲ್ಲ, ಯಾವುದೇ ಅಕ್ರಮ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಆಗದ ವ್ಯಕ್ತಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

***ಮರುವಿಚಾರಣೆ:*** ***ಇರುವುದಿಲ್ಲ.***

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***